# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
# ನ್ಯಾಯಾಲಯ, ಹೊಸನಗರ
## ಸಿ.ಸಿ. ನಂ. 706/2020

**ಚಾಸಾ–4 ಪ್ರಾಸಾ–3**

| | | |
|---|---|---|
| ಹೆಸರು | – | ದಿನೇಶ |
| ತಂದೆಯ ಹೆಸರು | – | ಕೃಷ್ಣನಾಯ್ಕ |
| ವಯಸ್ಸು | – | **43** ವರ್ಷ |
| ವೃತ್ತಿ | – | ಕೂಲಿ |
| ವಾಸಸ್ಥಳ | – | ಮಸಗಲ್ಲಿ ಗ್ರಾಮ. |

(ದಿನಾಂಕಃ **05.06.2026** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ದಿನಾಂಕಃ 27.05.2020 ರಂದು ಚಾಸ 1 ರವರ ಮನೆಗೆ ಕಟ್ಟಿಗೆ ತರಲು ಚಾಸ 5 ರವರ ಪಿಕ್‌ಅಪ್ ನಲ್ಲಿ ಪ್ಲಾಂಟೇಷನ್ ಗೆ ಹೋಗಿರುತ್ತೇವೆ. ಸುಮಾರು 6.30 ರ ಸಮಯದಲ್ಲಿ ಕಟ್ಟಿಗೆಯನ್ನು ತುಂಬಿಕೊಂಡು ವಾಪಸ್ಸು ಮನೆಗೆ ಬರುವಾಗ ಚಾಸ 1 ರವರ ಮನೆಯ ಹತ್ತಿರ ಆರೋಪಿ 1 ರವರು ಅಡ್ಡಹಾಕಿರುತ್ತಾರೆ.

2. ಸೂಳೇಮಗನೇ ಕೆಳಗೆ ಇಳಿ ಅಂತ ಹೇಳಿ ಕೈಯಲ್ಲಿ ಇದ್ದ ಕತ್ತಿಯ ಹಿಂಬದಿಯಿಂದ ಚಾಸ 1 ರವರ ಕುತ್ತಿಗೆಗೆ ಹೊಡೆದಿರುತ್ತಾರೆ. ನಂತರ ಆರೋಪಿ 2 ರಿಂದ 5 ರವರು ಬಂದು ಆರೋಪಿ 2 ಮತ್ತು 3 ರವರು ಚಾಸ 1 ರವರ ಮೇಲೆ ದೊಣ್ಣೆಯಿಂದ ಮೈ ಕೈಗೆ ಹೊಡೆದು ಹಲ್ಲೆ ಮಾಡಿರುತ್ತಾರೆ.

3. ನಾನು ಮತ್ತು ಚಾಸ 5 ರವರು ಸದರಿ ಗಲಾಟೆಯನ್ನು ಬಿಡಿಸಿರುತ್ತೇವೆ. ಆರೋಪಿಗಳು ಮು.ಮಾಲು 1 ರಿಂದ 3 ಗಳನ್ನು ಸ್ಥಳದಲ್ಲಿ ಬಿಸಾಕಿ ಚಾಸ 1 ರವರಿಗೆ ಈ ದಾರಿಯಲ್ಲಿ

ಓಡಾಡಿದರೆ ಮನೆಗೆ ಬೆಂಕಿ ಹಚ್ಚಿ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿ ಮನೆ ಕಡೆ ಹೋಗಿರುತ್ತಾರೆ.

4. ಚಾಸ 1 ರವರಿಗೆ ಸ್ವಲ್ಪ ನೀರು ಕುಡಿಸಿ ಅಲ್ಲಿಂದ ಚಾಸ 5 ರವರ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆ ದಿನ ಆರೋಪಿಗಳು ಉಪಯೋಗಿಸಿದ ಕತ್ತಿ ದೊಣ್ಣೆಗಳು ನ್ಯಾಯಾಲಯದ ಮುಂದೆ ಇರುತ್ತವೆ, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ಎಂ.ಓ 1 ರಿಂದ 3 ಎಂದು ಗುರುತಿಸ್ಪಟ್ಟಿರುತ್ತವೆ.

5. ಸದರಿ ವಿಚಾರವಾಗಿ ಪೊಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆ ದಿನ ಚಾಸ 1 ರವರಿಗೆ ಹಲ್ಲೆ ಮಾಡಿದ ಆರೋಪಿಗಳು ಈಗ ನ್ಯಾಯಾಲಯದ ಮುಂದೆ ಇರುತ್ತಾರೆ, ಸಾಕ್ಷಿಯು ಅವರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಬಿ.ಎಸ್.ವಿ ರವರಿಂದಃ**

1. ಚಾಸ 1 ರವರು ನನ್ನ ದೊಡ್ಡಪ್ಪನ ಮಗ, ಚಾಸ 3 ರವರು ನನ್ನ ಮಾವನ ಮಗ. ಚಾಸ 1 ರವರ ಮನೆ ಯಾವ ಸರ್ವೆ ನಂಬರ್ ನಲ್ಲಿ ಇರುತ್ತದೆ ಎಂದು ಗೊತ್ತಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಸಾಕ್ಷಿಯು ಸ್ವ ಇಚ್ಛೆಯಿಂದ ಮುಂದುವರಿದು ಸರ್ವೆ ನಂ 80/4 ರಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

2. ನನಗೆ ಚಾಸ 6 ರವರು ಮಾವನಾಗಬೇಕು. ಚಾಸ 6 ರವರು ಆರೋಪಿ 5 ರವರಿಗೆ 1 ಎಕರೆ ಮಾರಾಟ ಮಾಡಿದ ನಂತರ ಈ ಗಲಾಟೆ ಪ್ರಾರಂಭವಾಗಿರುತ್ತದೆ ಎಂದರೆ ಸರಿ. ಆರೋಪಿ 2 ಮತ್ತು ನಾವು ಅನ್ಯೋನ್ಯವಾಗಿ ಇರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

3. ಅದೇ ದಿನ ಆರೋಪಿ 1 ರವರು ನನ್ನ ಮೇಲೆ, ನನ್ನ ಹೆಂಡತಿ, ಚಾಸ 1 ಮತ್ತು ಚಾಸ 1 ರವರ ಹೆಂಡತಿ ಇರುದ್ದ ಕ್ರಿಮಿನಲ್ ಮೊಖದಮ್ಮೆ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ದಾಖಲಿಸಿರಬಹದು ಎಂದು ನುಡಿಯುತ್ತಾರೆ.

4. ನಾವು ಆರೋಪಿ 1 ರವರ ಮೇಲೆ ಸಂಜೆ 6.30 ಗಂಟೆಗೆ ಹಲ್ಲೆ ಮಾಡಿರುತ್ತೇವೆ ಎಂದು ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಚಾಸ 1 ರವರು ನಮ್ಮನ್ನು ಈ ದಿನ ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ಸಾಕ್ಷಿ

ನುಡಿಯುವ ದಿನಾಂಕ ನಿಗಧಿಪಡಿಸಿದ್ದರಿಂದ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದು ನುಡಿಯುತ್ತಾರೆ.

5. ಚಾಸ 1 ಮತ್ತು ಆರೋಪಿಗಳ ಮಧ್ಯ ಸಿವಿಲ್ ವ್ಯಾಜ್ಯ ಇರುತ್ತದೆ ಎಂದು ಸೂಚಿಸಿದರೆ ಸರಿ. ಸರ್ವೆ ನಂ 83/4 ಆರೋಪಿ 5 ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅದು ತನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸ 1 ರವರ ಮನೆ ಸರ್ವೆ ನಂಬರ್ 83/4 ರಲ್ಲಿ ಇರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

6. ಆ ದಿನ ಆರೋಪಿಗಳು ಚಾಸ 1 ರವರಿಗೆ ಎಂ.ಒ 1 ರಿಂದ ಎಂ.ಒ 3 ಮು.ಮಾಲುಗಳಿಂದ ಹಲ್ಲೆ ಮಾಡಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನಾನು ಆ ದಿನ ಸ್ಥಳದಲ್ಲಿ ಇರಲಿಲ್ಲ ಮತ್ತು ಗಲಾಟೆಯನ್ನು ಬಿಡಿಸಿರುವುದಿಲ್ಲ ಮತ್ತು ಸದರಿ ಗಲಾಟೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಎಂದರೆ ಸರಿಯಲ್ಲ.

7. ಆರೋಪಿಗಳು ಚಾಸ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಆರೋಪಿಗಳಿಗೂ, ನ್ಯಾಯಾಲಯದ ಮುಂದೆ ಇರುವ ಮು.ಮಾಲಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.